<u>1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ</u>
<u>ಎಸ್.ಸಿ. ನಂ. 172/2022</u>

<u>ದಿನಾಂಕ ಃ 18.12.2025 ರಂದು ಪ್ರಮಾಣ ವಚನ ಬೋಧಿಸಲಾಗಿದೆ.</u>

ಸಿ. ಡಬ್ಲ್ಯೂ: 29 ಪಿ. ಡಬ್ಲ್ಯೂ:20

| | |
|---|---|
| ಸಾಕ್ಷಿದಾರರ ಹೆಸರು | ಸಿ.ಭುಜಲಿಂಗಯ್ಯ |
| ತಂದೆಯ ಹೆಸರು | ಚಿಕ್ಕಲಿಂಗಯ್ಯ ಉಃ ನರಸಿಂಹಯ್ಯ |
| ವಯಸ್ಸು | 53 ವರ್ಷ |
| ಉದ್ಯೋಗ | ಎಎಸ್ಐ, ಬೆಳಕವಾಡಿ ಪೊಲೀಸ್ ಠಾಣೆ. |
| ವಾಸ | ಬೆಳಕವಾಡಿ |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

1. ದಿಃ 04.07.2022 ರಿಂದ ನಾನು ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿಃ 04.08.2022 ರಂದು ದೇವರಾಜ ಪೊಲೀಸ್ ಠಾಣೆಯಿಂದ ನಮ್ಮ ಠಾಣೆಗೆ phone ಮೂಲಕ ನೆಟ್ಟಕಲ್ಲು ಗ್ರಾಮದ ಮಹದೇವಮ್ಮ ಮತ್ತು ಸಿದ್ದರಾಜು ರವರು ಸುಟ್ಟ ಗಾಯಗಳಿಂದ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಎಂದು ಮಾಹಿತಿ ನೀಡಿದ್ದರ ಮೆರಗೆ ನಾನು ಹಾಗೂ ಫ್ರಾಸಾ. 19 ರವರೊಂದಿಗೆ ಸದರಿ ಆಸ್ಪತ್ರೆಗೆ ತೆರಳಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳಿಗೆ , ಸದರಿ ಮಹದೇವಮ್ಮ ಮತ್ತು ಸಿದ್ದರಾಜು ರವರು ಹೇಳಿಕೆ ಯನ್ನು ನೀಡುವ ಸ್ಥಿತಿಯಲ್ಲಿ ಇದ್ದಾರೆಯೇ, ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿ ಇದ್ದರೆ ಅವರ ಹೇಳಿಕೆಗಳನ್ನು ಪಡೆಯುವ ಸಮಯದಲ್ಲಿ ಹಾಜರಿರುವಂತೆ ಮನವಿಗಳನ್ನು ನೀಡಿರುತ್ತೇನೆ. ಸದರಿ ಮನವಿಗಳ ಕಾರ್ಬನ್ ಪ್ರತಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ.44 ಮತ್ತು 45 ಎಂದು ಗುರುತಿಸಲಾಯಿತು.
3. ನಂತರ ಸದರಿ ಗಾಯಾಳು ಸಿದ್ದರಾಜು ರವರು ದಾಖಲಾಗಿದ್ದ ಪುರುಷರ ವಾರ್ಡಿಗೆ ಭೇಟಿ ನೀಡಿರುತೇನೆ. ಸದರಿ ಸಿದ್ದರಾಜು ರವರ ಹೇಳಿಕೆಯನ್ನು ವೈದ್ಯರ ಸಮಕ್ಷಮದಲ್ಲಿ ಪಡೆದಿರುತ್ತೇನೆ. ಸದರಿ ಹೇಳಿಕೆಯನ್ನು ನಮ್ಮ ಸಿಬ್ಬಂದಿ ಫ್ರಾಸಾ. 19 ರವರ ಮುಖೇನ ಬರೆಸಿಕೊಂಡಿರುತ್ತೇನೆ. ಸದರಿ ಹೇಳಿಕೆಗೆ ಸಿದ್ದರಾಜು ಹಾಗೂ ವೈದ್ಯಾಧಿಕಾರಿಯವರ ಸಹಿಗಳನ್ನು ಪಡೆದಿರುತ್ತೇನೆ.

ಸದರಿ ಹೇಳಿಕೆಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ.2 ಮತ್ತು 3 ಫೋಟೋಗಳನ್ನು ನೋಡಿ, ಸದರಿ ಫೋಟೋಗಳನ್ನು ಸಿದ್ದರಾಜು ರವರ ಹೇಳಿಕೆಯ ಸಮಯದಲ್ಲಿ ತೆಗೆಯಲಾಗಿದೆ ಎಂದು ಗುರುತಿಸಿರುತ್ತಾರೆ.

4. ನಂತರ ಸದರಿ ಆಸ್ಪತ್ರೆಯ ಮಹಿಳಾ ಸುಟ್ಟ ಗಾಯಗಳ ವಾರ್ಡಿಗೆ ನಾನು ಮತ್ತು ಫ್ರಾಸಾ. 19 ರವರ ತೆರಳಿದ್ದು, ಅಲ್ಲಿ ದಾಖಲಾಗಿದ್ದ ಮಹದೇವಮ್ಮ ರವರ ಹೇಳಿಕೆಯನ್ನು ವೈದ್ಯರ ಸಮಕ್ಷಮ ದಾಖಲು ಮಾಡಿಕೊಂಡಿರುತ್ತೇನೆ. ಸದರಿ ಹೇಳಿಕೆಯನ್ನು ಫ್ರಾಸಾ. 19 ರವರ ಮೂಲಕ ಬರೆಸಿಕೊಂಡಿರುತ್ತೇನೆ. ಸದರಿ ಹೇಳಿಕೆಗೆ ಮಹದೇವಮ್ಮ ರವರ ಬಲಗೈ ಹೆಬ್ಬೆರಳಿನ ಗುರುತನ್ನು ಪಡೆದುಕೊಂಡಿರುತ್ತೇನೆ. ಮಹದೇವಮ್ಮ ರವರ ಎಡಗೈ ಹೆಬ್ಬೆರಳಿಗೆ ಸುಟ್ಟ ಗಾಯವಾಗಿದ್ದರಿಂದ, ಎಡಗೈ ಹೆಬ್ಬೆರಳಿನ ಗುರುತನ್ನು ಪಡೆದುಕೊಂಡಿಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.43 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ, ಸದರಿ ಫೋಟೋಗಳನ್ನು ಮಹದೇವಮ್ಮ ರವರು ಇದ್ದ ವಾರ್ಡಿನಲ್ಲಿ phone ಮೂಲಕ ತೆಗೆಯಲಾಗಿದೆ ಎಂದು ಗುರುತಿಸಿರುತ್ತಾರೆ. *ಸದರಿ ಫೋಟೋಗಳ ಬಗ್ಗೆ ಕಲಂ 65(ಬಿ) ಪ್ರಮಾಣ ಪತ್ರವನ್ನು ಹಾಜರಿಸದೇ ಇರುವುದರಿಂದ ಸದರಿ ಫೋಟೋಗಳನ್ನು ಗುರುತಿಸಿರುವುದಿಲ್ಲ.*

5. ಸದರಿ ಸಿದ್ದರಾಜು ಹಾಗೂ ಮಹದೇವಮ್ಮ ರವರ ಹೇಳಿಕೆಗಳನ್ನು ಪಡೆದುಕೊಂಡ ನಂತರ ನಾವು ಬೆಳಕವಾಡಿ ಪೊಲೀಸ್ ಠಾಣೆಗೆ ವಾಪಸ್ಸು ಆಗಿ ಸದರಿ ಹೇಳಿಕೆಗಳನ್ನು ನಾನು ಚಾಸಾ. 30 ರವರ ಮುಂದೆ ಮುಂದಿನ ಕ್ರಮಕ್ಕಾಗಿ ಹಾಜರಿಸಿರುತ್ತೇನೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ Chief defence counsel ರವರಿಂದ ಃ**

6. ಸದರಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ತೆರಳಿ ಗಾಯಾಳುಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳುವ ಬಗ್ಗೆ ಮೇಲಾಧಿಕಾರಿಗಳು ಲಿಖಿತ ಸೂಚನಾ ಪತ್ರ ನೀಡಿಲ್ಲ. ಸದರಿ ಕೆ.ಆರ್. ಆಸ್ಪತ್ರೆಗೆ ಬೆಳಗ್ಗೆ 11.30 ಗಂಟೆಗೆ ಹೋಗಿ, ಬೆಳಗ್ಗೆ 11.45 ಗಂಟೆ ಸಮಯದಲ್ಲಿ ವೈದ್ಯಾಧಿಕಾರಿಯವರಾದ ಡಾ. ವಿಜಯ್ ಕುಮಾರ್ ರವರಿಗೆ ಮನವಿಗಳನ್ನು ನೀಡಿರುತ್ತೇನೆ. ಸದರಿ

ವೈದ್ಯಾಧಿಕಾರಿಯವರು ಗಾಯಾಳುಗಳು ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿ ಇರುವ ಬಗ್ಗೆ ಪ್ರಮಾಣಪತ್ರವನ್ನು ನೀಡಿದ್ದಾರೆಯೇ ಎಂದರೆ ಸಾಕ್ಷಿಯು, ವೈದ್ಯಾಧಿಕಾರಿಯವರು ನಾವು ನೀಡಿದ್ದ ಮನವಿಯ ಮೇಲೆಯೇ ಸದರಿ ಹೇಳಿಕೆಯನ್ನು ನೀಡುವ ಸ್ಥಿತಿಯಲ್ಲಿ ಇರುವ ಬಗ್ಗೆ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸಿದ್ದರಾಜು ದಾಖಲಾಗಿದ್ದ ವಾರ್ಡಿನ ನಂಬರ್, ಬೆಡ್ ನಂಬರ್ ನನಗೆ ಗೊತ್ತಿಲ್ಲ.

7. ಸದರಿ ಗಾಯಾಳುಗಳ ಜೊತೆ ಅವರ ಸಂಬಂಧಿಕರು ಯಾರು ಇದ್ದರೆಂದು ನನಗೆ ಗೊತ್ತಿಲ್ಲ. ಸದರಿ ವಾರ್ಡುಗಳಲ್ಲಿ ಬೇರೆ ಎಷ್ಟು ರೋಗಿಗಳು ಇದ್ದರೆಂದು ನಾನು ನೋಡಿಲ್ಲ. ನಾನು ಮಧ್ಯಾಹ್ನ 12.00 ರಿಂದ 1.00 ಗಂಟೆ ತನಕ ಸಿದ್ದರಾಜುರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸಿದ್ದರಾಜು ರವರ ಹೇಳಿಕೆಯನ್ನು ಪ್ರಶ್ನೋತ್ತರ ರೀತಿಯಲ್ಲಿ ಬರೆದುಕೊಂಡಿಲ್ಲ. ಸಾಕ್ಷಿಯು ಮುಂದುವರೆದು, ಘಟನೆ ಏನಾಯಿತು ಎಂದು ಕೇಳಿದಾಗ, ಅವರು ಹೇಳಿದ್ದ ರೀತಿಯಲ್ಲಿ ಅವರ ಹೇಳಿಕೆಯನ್ನು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಸದರಿ ಗಾಯಾಳು ಸಿದ್ದರಾಜು ರವರು ಹೇಳಿದ ಹೇಳಿಕೆಯನ್ನು ನಾನು ಹೇಳಿದಂತೆ ನಮ್ಮ ಸಿಬ್ಬಂದಿ ಪ್ರಾಸಾ.19 ರವರು ಬರೆದುಕೊಂಡಿದ್ದರು. ನಿಪಿ.2 ಮತ್ತು 3 ಫೋಟೋದಲ್ಲಿ ವೈದ್ಯರು ಇದ್ದಾರೆ. ಸದರಿ ಫೋಟೋದಲ್ಲಿ ಇರುವ ಇನ್ನೊಬ್ಬ ವ್ಯಕ್ತಿ ನರ್ಸ್ ಆಗಿರುತ್ತಾರೆ. ಸಿದ್ದರಾಜುರವರು ನಿಪಿ.1 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾವು ಹೇಳಿಕೆಯನ್ನು ತಯಾರು ಮಾಡಿಕೊಂಡು ಹೋಗಿ ಸದರಿ ಸಿದ್ದರಾಜು ರವರ ರುಜುವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ. 2 ಮತ್ತು 3 ರಲ್ಲಿ ದಿನಾಂಕ ಇರುವುದಿಲ್ಲ. ಸದರಿ ಫೋಟೋಗಳ ಪ್ರಿಂಟನ್ನು ಎಲ್ಲಿ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

8. ಮೃತೆ ಮಹದೇವಮ್ಮ ರವರ ಹೇಳಿಕೆಯನ್ನು ಮಧ್ಯಾಹ್ನ 1.15 ರಿಂದ 2.15 ರ ತನಕ ಪಡೆದಿರುತ್ತೇನೆ. ಮಹದೇವಮ್ಮ ರವರು ಇದ್ದ ವಾರ್ಡಿನ ನಂಬರ್ ನನಗೆ ಗೊತ್ತಿಲ್ಲ. ಅವರ ಜೊತೆ ಇದ್ದ ಸಂಬಂಧಿಗಳು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಮಹದೇವಮ್ಮ ರವರ ಹೇಳಿಕೆಯನ್ನು ಅವರ ಹೇಳಿದಂತೆ ನಾನು ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ.43 ಹೇಳಿಕೆಯನ್ನು ನಾವೇ ತಯಾರು ಮಾಡಿಕೊಂಡು ಹೋಗಿ ಸದರಿ ಮೃತೆ ಮಹದೇವಮ್ಮ ರವರ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಫೋಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಆರೋಪಿಗೆ ಶಿಕ್ಷೆ ಕೊಡಿಸಬೇಕು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಸದರಿ ಗಾಯಾಳುಗಳ ಹೇಳಿಕೆಗಳನ್ನು ತಯಾರು ಮಾಡಿಕೊಂಡು

ಹೋಗಿ ರುಜು ಮತ್ತು ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡು, ವೈದ್ಯಾಧಿಕಾರಿಯವರ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನು ಇಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.